All India Radio: Bangalore
National Bulletin In Kannada
13.11.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

- ರಾಷ್ಟ್ರಪತಿ ದ್ರೌಪದಿ ಮುರ್ಮು ಸಮಕ್ಷಮದಲ್ಲಿ ಇಂದು ಭಾರತಕ್ಕೆ ಚೀತಾಗಳನ್ನು ಹಸ್ತಾಂತರಿಸಲಿರುವ ಬೋಟ್ಸ್ವಾನಾ
- ಕಾರು ಸ್ಫೋಟ ಘಟನೆ ಖಂಡಿಸಿ ಕೇಂದ್ರ ಸಂಪುಟ ನಿರ್ಣಯ : ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿಗೆ ಬದ್ಧತೆ ಪುನರುಚ್ಚಾರ
- ಇಪ್ಪತ್ತೈದು ಸಾವಿರ ಕೋಟಿ ರೂಪಾಯಿಗಳ ರಫ್ತು ಉತ್ತೇಜನ ಮಿಷನ್‌ಗೆ ಕೇಂದ್ರ ಸಂಪುಟ ಅನುಮೋದನೆ
- ಕಳೆದೊಂದು ದಶಕದಲ್ಲಿ ಭಾರತದಲ್ಲಿ ಕ್ಷಯರೋಗ ಪ್ರಕರಣಗಳ ಪ್ರಮಾಣ ಶೇಕಡ ೨೧ರಷ್ಟು ಇಳಿಕೆ
- ಫಿಡೆ ವಿಶ್ವಕಪ್ ಚೆಸ್ ಚಾಂಪಿಯನ್ ಶಿಪ್ : ಳನೇ ಸುತ್ತಿನಲ್ಲಿಂದು ಅರ್ಜುನ್, ಪ್ರಜ್ಞಾನಂದ ಮತ್ತು ಪಿ. ಹರಿಕೃಷ್ಣ ಸೆಣಸು

<><><><>

ಪ್ರಾಜೆಕ್ಟ್ ಚೀತಾ ಅಡಿಯಲ್ಲಿ ಬೋಟ್ಸ್ವಾನಾ ಇಂದು ಭಾರತಕ್ಕೆ ಚೀತಾಗಳನ್ನು ಹಸ್ತಾಂತರಿಸಲಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಬೋಟ್ಸ್ವಾನಾದ ಅವರ ಸಹವರ್ತಿ ಡುಮಾ ಬೊಕೊ ನಡುವಿನ ದ್ವಿಪಕ್ಷೀಯ ಮಾತುಕತೆಯ ಕೊನೆಯಲ್ಲಿ ನಿನ್ನೆ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಘೋಷಿಸಲಾಯಿತು. ಭಾರತ ಮತ್ತು ಬೋಟ್ಸ್ವಾನಾ ರಾಷ್ಟ್ರಪತಿಗಳು ಸೆರೆಹಿಡಿದ ಚಿರತೆಗಳನ್ನು ಗ್ಯಾಬೊರೋನ್ ಬಳಿಯ ಕ್ವಾರಂಟೈನ್ ಸೌಲಭ್ಯಕ್ಕೆ ಬಿಡುಗಡೆ ಮಾಡುವುದನ್ನು ವೀಕ್ಷಿಸಲಿದ್ದಾರೆ. ಈ ಕಾರ್ಯಕ್ರಮವು ಬೋಟ್ಸ್ವಾನಾ ಭಾರತಕ್ಕೆ ಚಿರತೆಗಳ ಸಾಂಕೇತಿಕ ದಾನವನ್ನು ಗುರುತಿಸುತ್ತದೆ. ಹಸ್ತಾಂತರವು ಎರಡು ದೇಶಗಳ ನಡುವಿನ ವನ್ಯಜೀವಿ ಸಂರಕ್ಷಣೆಯಲ್ಲಿ ದ್ವಿಪಕ್ಷೀಯ ಸಹಕಾರದಲ್ಲಿ ಹೊಸ ಅಧ್ಯಾಯದ ಆರಂಭವನ್ನು ಸೂಚಿಸುತ್ತದೆ. ಈ ಬಗ್ಗೆ ನಮ್ಮ ವರದಿಗಾರರು ಹೆಚ್ಚಿನ ಮಾಹಿತಿ ನೀಡಿದ್ದಾರೆ.

ಬೈಟ್: ಮನೀಶ್ (೨೮ ಸೆಕೆಂಡ್)

ಭಾರತದಲ್ಲಿ ಚಿರತೆಗಳ ಸಂತಾನೋತ್ಪತ್ತಿಗೆ ಸಹಾಯ ಮಾಡಲು ಬೋಟ್ಸ್ವಾನಾ ಭಾರತಕ್ಕೆ ಎಂಟು ಚಿರತೆಗಳನ್ನು ದಾನ ಮಾಡಲಿದೆ. ಈ ಒಪ್ಪಂದವು ಹಂಚಿಕೆಯ ಪರಿಸರ ಗುರಿಗಳು ಮತ್ತು ಜೀವವೈವಿಧ್ಯತೆಯ ಉತ್ತೇಜನದ ಮನೋಭಾವವನ್ನು ಪ್ರದರ್ಶಿಸುತ್ತದೆ ಎಂದು ಅಧ್ಯಕ್ಷ ಡುಮಾ ಬೊಕೊ ಹೇಳಿದ್ದರು. ಪ್ರಾಜೆಕ್ಟ್ ಚೀತಾ ಎಂಬುದು ಚಿರತೆಗಳ ಅಳಿವಿನ ದಶಕಗಳ ನಂತರ ಭಾರತಕ್ಕೆ ಅವುಗಳನ್ನು ಮತ್ತೆ ಪರಿಚಯಿಸುವ ಗುರಿಯನ್ನು ಹೊಂದಿರುವ ಒಂದು ವಿಶಿಷ್ಟ ಉಪಕ್ರಮವಾಗಿದೆ. ನಿನ್ನೆ ಇಬ್ಬರು ನಾಯಕರ ನಡುವಿನ ದ್ವಿಪಕ್ಷೀಯ ಮಾತುಕತೆಗಳ ನಂತರ, ಆರೋಗ್ಯ ರಕ್ಷಣೆ ಮತ್ತು ಔಷಧಗಳ ಕುರಿತು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಪ್ರವಾಸವನ್ನು ಮುಕ್ತಾಯಗೊಳಿಸುವ ಮುನ್ನ ಬೋಟ್ಸ್ವಾನಾದಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಲಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ೨೦೨೫ರ ನವೆಂಬರ್ ೧೦ರ ಸಂಜೆ ದೆಹಲಿಯ ಕೆಂಪು ಕೋಟೆಯ ಬಳಿ ನಡೆದ ಕಾರು ಸ್ಫೋಟದ ಭಯೋತ್ಪಾದಕ ಘಟನೆಯಲ್ಲಿ ಜೀವಹಾನಿಯಾದ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿತು. ಘಟನೆಯಲ್ಲಿ ಬಲಿಯಾದ ಅಮಾಯಕ ಜೀವಗಳಿಗೆ ಗೌರವ ಸಲ್ಲಿಸುವ ಸಲುವಾಗಿ ಸಚಿವ ಸಂಪುಟ ಎರಡು ನಿಮಿಷಗಳ ಮೌನ ಆಚರಿಸಿತು. ಬಳಿಕ, ಸಚಿವ ಸಂಪುಟ ಸಭೆ ಸ್ಫೋಟವನ್ನು ಖಂಡಿಸಿ ನಿರ್ಣಯ ಅಂಗೀಕರಿಸಿತು. ಮುಗ್ಧ ಜೀವಗಳ ನಷ್ಟಕ್ಕೆ ಕಾರಣವಾದ ಈ ಅನಾಗರಿಕ ಮತ್ತು ಹೇಡಿತನದ ಕೃತ್ಯವನ್ನು ಸಚಿವ ಸಂಪುಟವು ಸ್ಪಷ್ಟವಾಗಿ ಖಂಡಿಸಿ, ಭಯೋತ್ಪಾದನೆಯ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳ ಬಗ್ಗೆ ಶೂನ್ಯ ಸಹಿಷ್ಣುತೆಯ ನೀತಿಗೆ ಅಚಲ ಬದ್ಧತೆ ಪುನರುಚ್ಚರಿಸಿದೆ. ಘಟನೆಯ ತನಿಖೆಯನ್ನು ಅತ್ಯಂತ ತುರ್ತಾಗಿ ಮತ್ತು ವೃತ್ತಿಪರತೆಯಿಂದ ನಡೆಸಬೇಕೆಂದು ಸಚಿವ ಸಂಪುಟ ನಿರ್ದೇಶಿಸಿದೆ. ಇದರಿಂದಾಗಿ ಅಪರಾಧಿಗಳು ಮತ್ತು ಕೃತ್ಯಕ್ಕೆ ಸಹಕರಿಸಿದವರನ್ನು ನ್ಯಾಯಕ್ಕೆ ಗುರಿಪಡಿಸಲಾಗುವುದು ಎಂದು ನಿರ್ಣಯದಲ್ಲಿ ಹೇಳಲಾಗಿದೆ. ಸರ್ಕಾರ ಉನ್ನತ ಮಟ್ಟದಲ್ಲಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ರಾಷ್ಟ್ರೀಯ ಭದ್ರತೆ ಮತ್ತು ಪ್ರತಿಯೊಬ್ಬ ನಾಗರಿಕರ ಸುರಕ್ಷತೆಗೆ ಸರ್ಕಾರದ ನಿರಂತರ ಬದ್ಧತೆಗೆ ಅನುಗುಣವಾಗಿ, ಎಲ್ಲಾ ಭಾರತೀಯರ ಜೀವ ಮತ್ತು ಯೋಗಕ್ಷೇಮವನ್ನು ಕಾಪಾಡುವ ದೃಢ ಸಂಕಲ್ಪವನ್ನು ಸಂಪುಟ ಪುನರುಚ್ಚರಿಸಿ, ನಿರ್ಣಯ ಕೈಗೊಂಡಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಕಳೆದ ರಾತ್ರಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ರಫ್ತು ಉತ್ತೇಜನ ಮಿಷನ್-ಇ.ಪಿ.ಎಂ ಗೆ ಅನುಮೋದನೆ ನೀಡಿದೆ. ಇದು ೨೦೨೫-೨೬ರ ಕೇಂದ್ರ ಬಜೆಟ್ ನಲ್ಲಿ ಘೋಷಿಸಿರುವ ಪ್ರಮುಖ ಉಪಕ್ರಮವಾಗಿದ್ದು, ಭಾರತದ ರಫ್ತು ಸ್ಪರ್ಧಾತ್ಮಕತೆಯನ್ನು ವಿಶೇಷವಾಗಿ ಎಂ.ಎಸ್.ಎಂ.ಇಗಳು, ಮೊದಲ ಬಾರಿಗೆ ರಫ್ತು ಮಾಡುವವರು ಮತ್ತು ಕಾರ್ಮಿಕ- ವಲಯಗಳಲ್ಲಿ ಬಲಪಡಿಸುವ ಗುರಿ ಹೊಂದಿದೆ. ಈ ಮಿಷನ್ ರಫ್ತು ಉತ್ತೇಜನಕ್ಕಾಗಿ ಸಮಗ್ರ, ಹೊಂದಿಕೊಳ್ಳುವ ಮತ್ತು ಡಿಜಿಟಲ್ ಚಾಲಿತ ಚೌಕಟ್ಟನ್ನು ಒದಗಿಸುತ್ತದೆ, ಇದರ ಒಟ್ಟು ವೆಚ್ಚ ಪ್ರಸಕ್ತ ಹಣಕಾಸು ವರ್ಷದಿಂದ ೨೦೩೦-೩೧ನೇ ಹಣಕಾಸು ವರ್ಷಕ್ಕೆ ೨೫ ಸಾವಿರದ ೬೦ ಕೋಟಿ ರೂಪಾಯಿಗಳಾಗಿರುತ್ತದೆ. ಇದು ಜಾಗತಿಕ ವ್ಯಾಪಾರ ಸವಾಲುಗಳು ಮತ್ತು ವಿಕಸನಗೊಳ್ಳುತ್ತಿರುವ ರಫ್ತುದಾರರ ಅಗತ್ಯಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸುತ್ತದೆ. ಈ ಕುರಿತು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನ್ ವೈಷ್ಣವ್ ಮಾಹಿತಿ ನೀಡಿದ್ದಾರೆ.

ಧ್ವನಿ: ಅಶ್ವಿನ್ ವೈಷ್ಣವ್ (೨೪ ಸೆಕೆಂಡ್‌ಗಳು)

ಈ ಮಿಷನ್ ಎರಡು ಸಂಯೋಜಿತ ಉಪ-ಯೋಜನೆಗಳ ಮೂಲಕ ಕಾರ್ಯನಿರ್ವಹಿಸುತ್ತದೆ: ಒಂದು ನಿರ್ಯಾತ್ ಪ್ರೋತ್ಸಾಹನ್- ಬಡ್ಡಿ ಸಬ್ಸಿಡಿ, ರಫ್ತು ಹಣಕಾಸು ಸಂಬಂಧಿ ಅಂಶಗಳು, ಮೇಲಾಧಾರ ಖಾತರಿ, ಇ-ಕಾಮರ್ಸ್ ರಫ್ತುದಾರರಿಗೆ ಕ್ರೆಡಿಟ್ ಕಾರ್ಡ್ ಸೇರಿ ವಿವಿಧ ಸಾಧನಗಳ ಮೂಲಕ ಎಂ.ಎಸ್.ಎಂ.ಇಗಳಿಗೆ ಕೈಗೆಟುಕುವ ವ್ಯಾಪಾರ ಹಣಕಾಸು ಲಭ್ಯತೆಯನ್ನು ಸುಧಾರಿಸುವತ್ತ ಗಮನಹರಿಸುತ್ತದೆ.

<><><>

ಭಾರತದಲ್ಲಿ ಕ್ಷಯರೋಗ ಪ್ರಕರಣಗಳು ಕಳೆದೊಂದು ದಶಕದಲ್ಲಿ ಶೇಕಡ ೨೧ರಷ್ಟು ಇಳಿಕೆಯಾಗಿದೆ. ಇದು ರಾಷ್ಟ್ರೀಯ ಸರಾಸರಿ ಶೇಕಡ ೧೨ಕ್ಕೆ ಹೋಲಿಸಿದರೆ ಎರಡು ಪಟ್ಟು ಅಧಿಕವಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿರುವ ಜಾಗತಿಕ ಕ್ಷಯರೋಗ ವರದಿ - ೨೦೨೫ ಪ್ರಕಾರ ದೇಶದಲ್ಲಿ ಕ್ಷಯರೋಗಿಗಳ ಸಂಖ್ಯೆ ೨೦೧೫ರಲ್ಲಿ ಪ್ರತಿಲಕ್ಷ ಜನಸಂಖ್ಯೆಗೆ ೨೩೭ ಇದ್ದದ್ದು, ೨೦೨೪ರಲ್ಲಿ ೧೮೭ಕ್ಕೆ ಇಳಿಕೆಯಾಗಿದೆ. ಆರೋಗ್ಯ ಸಚಿವಾಲಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ವ್ಯಾಪ್ತಿ ಹೆಚ್ಚಳಕ್ಕೆ ಕ್ರಮ ಕೈಗೊಂಡಿರುವುದರಿಂದ ಸಾಕಷ್ಟು ಸುಧಾರಣೆಯಾಗಿದೆ. ಹಾಗಾಗಿ ಕ್ಷಯರೋಗ ಪ್ರಕರಣಗಳು ಏರಿಕೆಯಾಗಿಲ್ಲ ಎಂದು ತಿಳಿಸಿದೆ. ಕ್ಷಯರೋಗದಿಂದಾಗಿ ಸಾವನ್ನಪ್ಪುವವರ ಪ್ರಮಾಣವು ಗಣನೀಯವಾಗಿ ಇಳಿಕೆಯಾಗಿದೆ. ೨೦೧೫ರಲ್ಲಿ ಪ್ರತಿಲಕ್ಷ ಜನಸಂಖ್ಯೆಗೆ ೨೮ ಇದ್ದ ಮರಣ ಪ್ರಮಾಣ ೨೦೨೪ರಲ್ಲಿ ೨೧ಕ್ಕೆ ಇಳಿಕೆಯಾಗಿದೆ. ಸರ್ಕಾರ ಟಿಬಿ ಮುಕ್ತ ಭಾರತ ಅಭಿಯಾನ, ಆಯುಷ್ಮಾನ್ ಆರೋಗ್ಯ ಮಂದಿರ, ನಿ-ಕ್ಷಯ ಪೋಷಣ್ ಅಭಿಯಾನ ಸೇರಿದಂತೆ ಹಲವು ಕ್ರಮಗಳ ಮೂಲಕ ದೇಶವನ್ನು ಕ್ಷಯರೋಗ ಮುಕ್ತಗೊಳಿಸುವ ಗುರಿಯನ್ನು ಹೊಂದಿದೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕಳೆದ ರಾತ್ರಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ರಫ್ತುದಾರರಿಗಾಗಿ ಸಾಲ ಖಾತ್ರಿ ಯೋಜನೆ-ಸಿ.ಜಿ.ಎಸ್.ಇ ಪರಿಚಯಿಸಲು ಅನುಮೋದನೆ ನೀಡಿದೆ. ಎಂಎಸ್‌ಎಂಇಗಳು ಸೇರಿ ಅರ್ಹ ರಫ್ತುದಾರರಿಗೆ ೨೦ ಸಾವಿರ ಕೋಟಿ ರೂಪಾಯಿವರೆಗೆ ಹೆಚ್ಚುವರಿ ಸಾಲ ಸೌಲಭ್ಯಗಳನ್ನು ವಿಸ್ತರಿಸಲು, ಸಾಲ ನೀಡುವ ಸಂಸ್ಥೆಗಳಿಗೆ ರಾಷ್ಟ್ರೀಯ ಸಾಲ ಖಾತ್ರಿ ಟ್ರಸ್ಟಿ ಕಂಪನಿ ಲಿಮಿಟೆಡ್ ಮೂಲಕ ಶೇಕಡ ೧೦೦ ರಷ್ಟು ಸಾಲ ಖಾತರಿ ರಕ್ಷಣೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

<><><>

ಬಿಹಾರ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯ ನಾಳೆ ನಡೆಯಲಿದೆ. ಬಿಹಾರದ ೩೮ ಜಿಲ್ಲೆಗಳ ೪೬ ಮತ ಎಣಿಕೆ ಕೇಂದ್ರಗಳಲ್ಲಿ ಎಣಿಕೆ ಕಾರ್ಯ ನಡೆಯಲಿದೆ.

<><><>

ಗೋವಾದಲ್ಲಿ ನಡೆಯುತ್ತಿರುವ ಫಿಡೆ ಚೆಸ್ ವಿಶ್ವಕಪ್‌ನ ೪ನೇ ಸುತ್ತಿನ ಪಂದ್ಯದಲ್ಲಿಂದು ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಎರಿಗೈಸಿ, ಆರ್. ಪ್ರಜ್ಞಾನಂದ ಮತ್ತು ಪೆಂಟಾಲ ಹರಿಕೃಷ್ಣ ಆಡಲಿದ್ದಾರೆ. ಮಧ್ಯಾಹ್ನ ೩ ಗಂಟೆಗೆ ಪಂದ್ಯ ಆರಂಭವಾಗಲಿದೆ.

ಇದಕ್ಕೂ ಮೊದಲು ಅರ್ಜುನ್ ಅವರು, ಹಂಗೇರಿಯ ಪೀಟರ್ ಲೆಕೋ ಅವರೊಂದಿಗೆ ಉತ್ತಮವಾಗಿ ಆಡಿ ಡ್ರಾ ಸಾಧಿಸಿದ್ದರು. ಪ್ರಜ್ಞಾನಂದ ಅವರು ಸಹ ರಷ್ಯಾದ ಡ್ಯಾನಿಲ್ ದುಬೋವ್ ಅವರೊಂದಿಗೆ ಡ್ರಾ ಗಳಿಸಿದ್ದರು. ಹರಿಕೃಷ್ಣ ಅವರು ಸ್ವೀಡನ್‌ನ ನೀಲ್ಸ್ ಗ್ರ್ಯಾಂಡೇಲಿಯಸ್ ವಿರುದ್ಧ ಸೆಣಸಿ ಸಮಬಲ ಸಾಧಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>